ಉದಯವಾಣಿ

**Tuesday 14th January 2020, Page No.04**

# Greaves Cotton arm partners with RV College of Engineering to create EV Mentorship Model



ಉಪನಗರ ಸಮಾಚಾರ

## ಪ್ರತಿಭೆಗೆ ದೇಶದಲ್ಲಿ ಉತ್ತಮ ಅವಕಾಶ

**ಕೆಂಗೇರಿ:** ಪ್ರತಿಭೆಗಳು ದೇಶದಲ್ಲಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಗ್ರೀವ್ಸ್ ಕಾಟನ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನಾಗೇಶ್ ಬಸವನಹಳ್ಳಿ ಹೇಳಿದರು.

ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ವಿವಿ ಗ್ರೀವ್ಸ್ ಕಾಟನ್ ಸಂಸ್ಥೆಯೊಂದಿಗೆ ಇ ಮೊಬೈಲಿಟಿ (ಎಲೆಕ್ಟ್ರಿಕ್ ಮೊಬೈಲಿಟಿ) ಕುರಿತು, ಕೇಂದ್ರವನ್ನು ಸ್ಥಾಪಿಸಿ ತಂತ್ರಜ್ಞಾನದ ಅರಿವು ಮತ್ತು ಸಂಶೋಧನೆಯನ್ನು ಕೈಗೊಳ್ಳಲು ಒಡಂಬಡಿಕೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದಲ್ಲಿ ಪರಿಸರ ಮಾಲಿನ್ಯದಿಂದ ಹವಾಮಾನ ವೈಪರೀತ್ಯ, ಪ್ರಕೃತಿ ವಿಕೋಪದಂತಹ ಸಮಸ್ಯೆಯಿಂದ ಪಾರಾಗಲು ಇ ಮೊಬೈಲಿಟಿ ಉತ್ತಮ ಮಾರ್ಗೋಪಾಯವಾಗಿದೆ. ವಿದ್ಯಾ ಸಂಸ್ಥೆಗಳು ಕೈಗಾರಿಕೆಗಳ ಜೊತೆಗೆ ಉತ್ತಮ ಬಾಂಧವ್ಯವನ್ನು ಹೊಂದಿರಬೇಕಿರುವುದು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ. ವಿದ್ಯಾರ್ಥಿಗಳಿಗೆ ಪೂರಕ ಕೌಶಲ್ಯದ ಜತೆಗೆ ಉದ್ಯೋಗಾವಕಾಶಗಳು ಲಭ್ಯವಾಗುತ್ತದೆ ಎಂದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟಿ ಡಾ.ಎಂ.ಪಿ.ಶ್ಯಾಮ್, ಉಮೇಶ್, ಕೃಷ್ಣಪ್ಪ ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಮಣ್ಯ, ಇ-ಮೊಬೈಲಿಟಿ ಸಂಸ್ಥೆಯ ಅಧಿಕಾರಿ ಡಾ.ಎಂ.ಎನ್.ದಿನೇಶ್ ಇತರರಿದ್ದರು.

**ಆರ್.ವಿ.ತಾಂತ್ರಿಕ ವಿವಿ ಗ್ರೀವ್ಸ್ ಕಾಟನ್ ಸಂಸ್ಥೆಯೊಂದಿಗೆ ಇ ಮೊಬೈಲಿಟಿ ಕುರಿತು ಕೇಂದ್ರವನ್ನು ಸ್ಥಾಪಿಸಲು ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟಿ ಡಾ. ಎಂ.ಪಿ.ಶ್ಯಾಮ್ ಅವರು ಗ್ರೀವ್ಸ್ ಕಾಟನ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ನಾಗೇಶ್ ಬಸವನಹಳ್ಳಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡರು.**

**ಸ್ವಾಮಿ ವಿವೇಕಾನಂದರ ಜಯಂತಿಯ ಅಂಗವಾಗಿ ರಾಷ್ಟ್ರೀಯ ಯುವದಿನ ಉತ್ಸವ ಸಂಸ್ಥೆಯು ಬೊಮ್ಮನಹಳ್ಳಿಯ ಎಚ್ ಎಸ್ ಆರ್ ಬಡಾವಣೆಯ ಬಿಬಿಎಂಪಿ ಆಟದ ಮೈದಾನದಲ್ಲಿ ಏರ್ಪಡಿಸಿದ್ದ ದೇಸೀ ಕ್ರೀಡಾ ಹಬ್ಬದ ಮಹಿಳಾ ಕಬಡ್ಡಿ ವಿಭಾಗದಲ್ಲಿ ಮೊದಲ ಬಹುಮಾನ ಪಡೆದ ಧಾರವಾಡದ ಬಿ.ಸಿ.ರಮೇಶ್ ಅಕಾಡೆಮಿ ತಂಡಕ್ಕೆ ಸಂಸದ ತೇಜಸ್ವಿ ಸೂರ್ಯ ಬಹುಮಾನ ವಿತರಿಸಿದರು.**

ಉದಯವಾಣಿ Tue, 14 January 2020
https://epaper.udayavani.com/c/47973900